ಸಾಕ್ಷಿಯನ್ನು ದಿಃ **03.01.2024** ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ 2,3 ಮತ್ತು 6ನೇ ಎದುರುದಾರರ ಪರ ಶ್ರೀ ಬಿ.ಎ.ಎಸ್.ವಕೀಲರಿಂದಃ-

ಅಸಲು ದಾವಾದಲ್ಲಿ ಒಂದು ಮತ್ತು ಎರಡನೇ ಎದುರುದಾರರಿಗೆ ತಲಾ 1/6 ಭಾಗಾಂಶಕ್ಕೆ ಆದೇಶವಾಗಿದೆ ಎಂದರೆ ಸರಿ. ಅವರವರ ಭಾಗಾಂಶಕ್ಕೆ ಅವರವರೇ ಸಂಪೂರ್ಣ ಹಕ್ಕುದಾರರು ಎಂದರೆ ಸರಿ. ನಮ್ಮ ಹಾಗೂ ಒಂದು ಮತ್ತು ಎರಡನೇ ಎದುರುದಾರರ ನಡುವೆ ಯಾವುದೇ ದ್ವೇಷ ಇಲ್ಲ. ಒಂದು ಮತ್ತು ಎರಡನೇ ಎದುರುದಾರರಿಗೆ ಬಂದಂತಹ ಭಾಗಾಂಶವನ್ನು ಅವರು ಬೇರೆ ಯಾರಿಗಾದರೂ ವಿಲೇ ಮಾಡಲು ಸಂಪೂರ್ಣ ಹಕ್ಕುದಾರರು ಎಂದರೆ ಸರಿ. ಒಂದು ಮತ್ತು ಎರಡನೇ ಎದುರುದಾರರು ತಮ್ಮ ಭಾಗಾಂಶವನ್ನು ಆರನೇ ಎದುರುದಾರರಿಗೆ ವಿಲ್ ಮೂಲಕ ಬರೆದುಕೊಟ್ಟಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಒಂದನೇ ಎದುರುದಾರರು ಹಾಲಿ ಮರಣ ಹೊಂದಿದ್ದಾರೆ ಎಂದರೆ ಸರಿ. ಈ ರೀತಿ ಒಂದನೇ ಎದುರುದಾರರು ಮರಣ ಹೊಂದಿರುವುದರಿಂದ ಅವರ ಭಾಗಾಂಶಕ್ಕೆ ಆರನೇ ಎದುರುದಾರರು ಈಗ ಸಂಪೂರ್ಣ ಹಕ್ಕುದಾರರಾಗಿದ್ದಾರೆ ಎಂದರೆ ಸರಿ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಜೈಬುನ್ನಿಸಾ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ., ಹುಣಸೂರು.